ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥ ಕಾಮಗಾರಿ ಕೆಲಸದಲ್ಲಿ ಸರ್ಕಾರ ಕೈ ಹಾಕಲಿಕ್ಕೆ ಬರುವುದಿಲ್ಲ ಪ್ರಭಾವಿ ಸನ್ಮಾನ್ಯ ಸದಸ್ಯರೂ ಅವರೆ ಕೈಗುಲ್ಲಿಯೇ ಈ ಕೆಲಸವನ್ನು ಮಾಡಿಸಿಕೊಳ್ಳಲಿಕ್ಕೆ ಶಕ್ತಿ ಇದೆ ಎನ್ನುವ ಪರಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿಗೆ ಹಣ ಕೊಡತಕ್ಕದ್ದು ಸರ್ಕಾರದ ಕರ್ತವ್ಯ...

ಅಧ್ಯಕ್ಷರು.—ನಿಯಮ ೩೫ಳಿರಲ್ಲಿ ಮತ್ತೆ ವಿಚಾರ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇಲ್ಲ. ದಯವಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ ಕುಶಾಲ.—ಅಧ್ಯಕ್ಷರೆ, ನನ್ನ ಹೆಸರಿನಲ್ಲಿ ನಿಯಮ ೩೫ಳಿ ಪ್ರಕಾರ ಎರಡು ವಿಚಾರ ಇದೆ ಅವೆರಡನ್ನೂ ಕೂಡ ನಾನು ಓದಿಬಿಡುತ್ತೇನೆ.

ಅಧ್ಯಕ್ಷರು.—ತಾವು ಮೊದಲು ಓದಿ ಹೇಳಿ.

೧೧) ಸರ್ಕಾರಿ ನೌಕರರ ವರ್ಗಾವಣೆಯನ್ನು ಜೂನ್ ತಿಂಗಳಲ್ಲಿಯೇ ಮಾಡಲು ಒತ್ತಾಯ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಮೊದಲನೆಯದು ರಾಜ್ಯಾದ್ಯಂತ ಅವಧಿಪೂರ್ಣ ಹಾಗೂ ಬೇಡಿಕೆಯ ವರ್ಗಾವಣೆಯಂತೆ ವಿವಿಧ ಸರಕಾರಿ ಇಲಾಖಾ ನೌಕರರ ಸಿಬ್ಬಂದಿ ಮತ್ತು ಅಧಿಕಾರಿ ವರ್ಗದವರನ್ನು ಸರಕಾರಿ ವರ್ಗಾವಣೆ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆಯೇ ಅಥವಾ ಇಲ್ಲವೇ ವರ್ಗಾವಣೆ ಮಾಡುವ ಯೋಜನೆಯನ್ನು ಇಟ್ಟುಕೊಂಡಲ್ಲಿ ಜೂನ್ ತಿಂಗಳು ಪ್ರಥಮ ವಾರವಾದರೂ ವರ್ಗಾವಣೆ ಆದೇಶ ನೀಡದೆ ವಿಳಂಬವಾಗಲು ಕಾರಣಗಳೇನು? ಸರಕಾರಿ ನೌಕರ ಸಿಬ್ಬಂದಿಗಳನ್ನು ನಿರ್ದಿಷ್ಟ ಅವಧಿಯ ನಂತರ ವರ್ಗಾವಣೆ ಮಾಡಲು ಸೇವಾ ನಿಯಮಾವಳಿ ಕಾನೂನಿನ ಅಡಿ ಬರುವುದಿಲ್ಲವೆ ಮತ್ತು ತಡವಾಗಿ ವರ್ಗಾವಣೆ ಆಗುವುದರಿಂದ ಅವರ ಕುಟುಂಬಕ್ಕೆ ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲಾ ಕಾಲೇಜುಗಳಿಗೆ ತೊಂದರೆಯಾಗುವುದರಿಂದ ತಡವಾದ ವರ್ಗಾವಣೆಯನ್ನು ಕೈ ಬಿಡಬಾರದೇಕೆ ಎಂದು ಸರಕಾರದ ಗಮನ ಸೆಳೆಯಬಯಸುತ್ತೇನೆ.

೧೨) ಸುಳ್ಯ ತಾಲ್ಲೂಕಿಗೆ ವಿದ್ಯುತ್ ಉಪಕೇಂದ್ರವನ್ನು ಈ ವರ್ಷವೇ ಮಂಜೂರು ಮಾಡುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಇನ್ನು ಎರಡನೆಯದು ಸುಳ್ಯ ತಾಲ್ಲೂಕಿನ ಸೂಳ್ಯದಲ್ಲಿ ೩೩.೧೧ ಕಿಲೋವಾಟ್ ವಿದ್ಯುತ್ ಸಬ್‌ಸ್ಟೇಷನ್ ಇರುವುದು ಇಲ್ಲಿ ಈಗ ಕೆಲವು ವರ್ಷದಿಂದ ೩೩.೧೧ ಕಿಲೋವಾಟ್ ಬದಲು ೧೫ ಕಿ ವಾಟ್ ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ಮಾತ್ರ ಅಳವಡಿಸಲಾಗಿದೆ. ಇದು ಓವರ್ ಲೋಡಿನಿಂದ ಕೆಲಸ ಮಾಡುತ್ತಿದೆ. ಇಲ್ಲಿಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಒದಗಿಸಲು ಕಳೆದ ಮೂರು ವರ್ಷಗಳಿಂದ ೨೦ ಅಂಶಗಳ ಕಾರ್ಯಕ್ರಮದ ಸಭೆ ಹಾಗೂ ತಾಲ್ಲೂಕು ಪಂಚಾಯತಿ ಸಮಿತಿ ಸಭೆಯ ನಿರ್ಣಯದಂತೆ ಇಲಾಖೆಗೆ ಹಾಗೂ ಸರಕಾರಕ್ಕೆ ಹಲವು ಬಾರಿ ಬರೆದುಕೊಳ್ಳಲಾಗಿತ್ತು. ಆದರೆ ಇಲಾಖೆಯಾಗಲಿ ಸರಕಾರವಾಗಲಿ ಈ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಅಸಾಧ್ಯವಾಗಿದೆ. ಇದರಿಂದಾಗಿ ತಾಲ್ಲೂಕಿನಲ್ಲಿ ಇತರ ಕಡೆಗಳಲ್ಲಿ ಅಳವಡಿಸಿದ ೧೧.೪೪೦ ಕಿ. ವಾಟ್ ಟ್ರಾನ್ಸ್‌ಫಾರ್ಮರುಗಳು, ಓವರ್‌ಲೋಡಿನಿಂದಾಗಿ ಹಲವಾರು ಬಾರಿ ಸುಟ್ಟು ಹೋಗುತ್ತಿವೆ. ಇದರಿಂದಾಗಿ ತಾಲ್ಲೂಕಿನಾದ್ಯಂತ ಇರುವ ಟ್ರಾನ್ಸ್‌ಫಾರ್ಮರುಗಳು ಸುಟ್ಟು ಹೋಗುವುದು ಮಾತ್ರವಲ್ಲದೆ ತಾಲ್ಲೂಕಿನಲ್ಲಿ ದಿನದಲ್ಲಿ ಹಲವು ಬಾರಿ ವಿದ್ಯುತ್ ನಿಲುಗಡೆಯಾಗುತ್ತಿದೆ. ಮತ್ತು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸದೆ ಕಡಿಮೆ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರಿಂದ ಹಳ್ಳಿಯಲ್ಲಿ ರೈತರಿಗೆ ವಿದ್ಯುತ್ ಪಂಪುಗಳನ್ನು ಚಾಲು ಮಾಡಲು ಆಗ್ತಾಗಿ ಬೇಕಾದ ವೋಲ್ಟೇಜು ಕೂಡ ದೊರೆಯದೆ ತೊಂದರೆಯಾಗುತ್ತಿದೆ. ಆದೇ ರೀತಿ ಸೂಳ್ಯದಲ್ಲಿ ವಿದ್ಯುತ್ ಉಪಕೇಂದ್ರ ತೆರೆಯದೆ ಸುಳ್ಯಕ್ಕೆ ಬೇಕಾದ ಹೆಚ್ಚಿನ ವಿದ್ಯುತ್ ಸರಬರಾಜು ಹೊಂದಿದ ಪುತ್ತೂರು ತಾಲ್ಲೂಕಿನಲ್ಲಿರುವ ೧೧೦ ಕಿ. ವಾಟ್ ಸಬ್ ಸ್ಟೇಷನ್‌ನ ಟ್ರಾನ್ಸ್‌ಫಾರ್ಮರು ಕೂಡಾ ಓವರ್‌ಲೋಡು ಆಗುತ್ತಿದೆ. ಇದರ ಬದಲು ಪುತ್ತೂರಿನಲ್ಲಿ